ನೋಟೀಸ್.

ನೋಟೀಸು ಮೂಲಕ ತಿಳಿಯಪಡಿಸುವದೇನಂದರೆ—1904ನೆ ಇಸವಿ ಫೆಬ್ರವರಿ ಗುರ್ಯೇ ತಾರೀಖು ಲಾಗಾಯಿತು 1905ನೆ ಇಸವಿ ಜನವರಿ 31ನೆ ತಾರೀಖು ವರಿವಿಗು ಜೈಲಿನಲ್ಲಿ ತಯಾರಾಗತಕ್ಕ ಸಾರ್ವಾಗಳಿಗೆ ಬೇಕಾದಂಥಾ ಎಲ್ಲಾ ರಖಂ ತುಸಟುಗೆಳು ಮತ್ತು ಇತರ ಸಾರ್ವಾಗಳನ್ನು ಹಾಜರುಮಾಡಲು ಕಂಟ್ರಾಕ್ಟು ಪಡೆಯಲು ಇಷ್ಟವುಳ್ಳವರಿಂದ ಹಾಜರ್ಮಾಡಲ್ಪಡುವ ಸೀಲ್ಡ್ ಕವರ್ ನಿಗೆ ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರ್ಟೆಂಡೆಂಟರವರು 1904ನೆ ಇಸವಿ ಜನವರಿ 15ನೆ ಶುಕ್ರವಾರ 10 ಘಂಟೆ ವರಿಗು ಅಂಗೀಕರಿಸುವರು.

ಸರಬರಾಯಿ ಆಗಬೇಕಾದ ಪದಾರ್ಥಗಳ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1903ನೆ ಇಸವಿ ಡಿಸೆಂಬರು 24ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟ ಮಾಡಲ್ಪಟ್ಟು ಇರುತ್ತದೆ.

ಜೆ. ಹ್ಯೂಂ ರೈಟ್,
ಸೂಪರ್ಟೆಂಡೆಂಟ್ ಸೆಂಟ್ರಲ್ ಜೈಲ್, ಬೆಂಗಳೂರು.

ಅಮೃತ ಮಹಲ್ ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 21—24ನೆ ಡಿಸೆಂಬರು 1903, ಮೊಕ್ಕಾಂ ಬೆಂಗಳೂರು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ :—ಅಮೃತ ಮಹಲ್ ಇಲಾಖಾದಲ್ಲಿರುವ 4 ವರುಷದ ಕೆಲವು ಹೋರಿಗಳನ್ನು ಮತ್ತು ಕೆಲವು ಹೆಂಣು ರಾಸುಗಳನ್ನು ಹಾಸನ ತಾಲ್ಲೂಕು ಸೋಮನಹಳ್ಳಿ ಕಾವಲಲ್ಲಿ 1904ನೆ ಜನವರಿ 14ನೆ ತಾರೀಖು ಲಾಗಾಯಿತು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಜೊಡ ದರಖಾಸ್ತು ಮಾಡಿ ಪಡಿಯಬಹುದು.

ಹೆಚ್. ನಂಜುಂಡರಾಜ ಅರಸ್,
ಸೂಪರ್ಟಿಂಡೆಂಟ್ ಅಮೃತ ಮಹಲ್ ಇಲಾಖಾ.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ—ಬೆಂಗಳೂರ್.

ನೋಟಿಸ್, ತಾರೀಖು 8ನೆ ಡಿಸೆಂಬರ್ 1903.

ಈ ಕೆಳಗಡೆ ನಮೂದಿಸಿರುವ ಪುಸ್ತಕಗಳು ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ. ಇದರ ಕ್ರಯ ಪ್ರತಿ 1ಕ್ಕೆ ನಾಲ್ಕು ಆಣೆ :—

1901ನೆ ಇಸವಿ ಖಾನಿಷ್‌ಮಾರಿ ಲೆಖ್ಖದ ಬಾಬತು ಜಾತಿವಾರ್ ತೋರಿಸುವ ತಖ್ತೆಯುಳ್ಳ ಪುಸ್ತಕ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಇದರಿಂದ ಸಮಸ್ತ ಜನರಿಗೂ,—

ಹೊನ್ನಾಳಿ ತಾಲ್ಲೂಕು ನ್ಯಾಮತಿ ವಾಸಸ್ಥರಾಗಿ ಮೃತಪಟ್ಟ ನಾಡಿಗ ಸುಬ್ಬಣ್ಣನವರ ದತ್ತು ಮಗ ದಾಸಪ್ಪ ಮೈನರ್, ಈತನ ಕ್ಷೇಮ ಚಿಂತಕ ಹಾಂಗು ಜನಕತಂದೆ ಚಿಲ್ಲೂರು ನಾಡಿಗ ಕ್ರಿಷ್ಣಪ್ಪನು ತಿಳಿಯಪಡಿಸುವದೇನಂದರೆ :—

ಮೈನರ್ ದಾಸಪ್ಪನ ದತ್ತು ತಾಯಿ ಯವುನವ್ವ ಕೋಂ ಸುಬ್ಬಣ್ಣ ಈಕಿಗೆ ನಮ್ಮ ಕೆಲವು ದ್ವೇಷಿಗಳೂ ಬೋಧಿಕೆ ನಿಷ್ಕಾರಣವಾಗಿ ಪ್ರತಿ ಫಲವಿಲ್ಲದೆ ಮೈನರ್ ದಾಸಪ್ಪನ ಬಾಬತು ಕೆಲವು ಸ್ಥಿರಸ್ವೊತ್ತುಗಳನ್ನ ಅಡವು ಮಾಡಿಸಿಕೊಂಡು ಪತ್ರಗಳೂ ಬರಿಸಿಕೊಂಡಿರುವಂತೆಯೂ ಇನ್ನೂ ಕೆಲವರು ಖರೀದಿ ಮಾಡಿಕೊಳ್ಳುವದರಲ್ಲಿರುವದಾಗಿಯೂ ಸಮಾಚಾರ ಕೇಳುತ್ತೇನೆ. ಹಾಂಗೆ ಯಾರಾದರೂ ಮೈನರನಿಗೆ ವಿರೋಧವಾಗಿ ಅವನ ಬಾಬತು ಯಾವ ಸ್ಥಿರ ಸೊತ್ತುಗಳನ್ನಾಗಲಿ ಯಾವ ಮೂಲಕವಾಗಿಯಾದರೂ ಸದರಿ ಯವುನವ್ವನಿಂದಾ ಹೊಂದಕೂಡದು, ಆಕೆ ಹಕ್ಕುದಾರಳಲ್ಲಾ. ಆಕೆಗೆ ಹಾಂಗೆ ಮಾಡಲು ಹಕ್ಕಿಲ್ಲಾ ಪಕ್ಷ ಹಾಂಗೇನಾದರೂ ಯಾರಾದರೂ ಯಾವವಿಧವಾಗಿ ಪತ್ರ ಬರಿಸಿಕೊಂಡಿದ್ದೆ ಅದು ಮಂಜೂರಾಗತಕ್ಕದ್ದಿಲ್ಲ ಎಂಬುವದನ್ನ ಈ ಮೂಲಕ ಕೃತಪಡಿಸಿ ಇಡ್ಡೇನೆ.

ಕ್ರಿಷ್ಣಪ್ಪ ಚಿಲ್ಲೂರು ನಾಡಿಗ.